ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾ ಮತ್ತು ಪಾ ವಿಭಾಗ,
ಚಾ.ವಿ.ಸ.ನಿ.ನಿ, ಮಡಿಕೇರಿ-571201
Web site: www.cescmysore.org

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
O & M Division, CESC, Madikeri-571201
Telephone No : 08272-225650/224701
E-mail ID : cesceemdk@gmail.com

Company Identity Number :- (CIN): U40109KA2004SGC035177

ಕ್ರಮಾಂಕ: ಕಾನಿಇಂ(ವಿ)/ಸಕಾನಿಇಂ(ಕ)/ಸ.ಇಂ(ತಾಂ)/2022-23/ 4621 ದಿನಾಂಕ: 17.09.2022

29

## ಸಭೆಯ ನಡಾವಳಿಗಳು

ದಿನಾಂಕ 17.09.2022 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀಮತಿ.ಅನಿತಾ ಬಾಯಿ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
2. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
3. ಶ್ರೀ.ಕೆ.ಎಂ.ದಿಲೀಪ್ : ಸಹಾಯಕ ಇಂಜಿನಿಯರ್(ತಾಂ), ವಿರಾಜಪೇಟೆ
3. ಶ್ರೀ.ಹೆಚ್.ಎಸ್.ರಮೇಶ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಸೆಸ್ಕ್, ವಿರಾಜಪೇಟೆ.
4. ಶ್ರೀ.ಕೆ.ಎಸ್.ಸ್ವರಾಗ್ : ಕಿರಿಯ ಇಂಜಿನಿಯರ್(ತಾಂ), ಸೆಸ್ಕ್, ಸಿದ್ದಾಪುರ.
5. ಶ್ರೀ.ಮನುಕುಮಾರ್.ಹೆಚ್.ಜಿ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಅಮ್ಮತ್ತಿ.
6. ಶ್ರೀ.ಜಗದೀಶ್ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ಸೆಸ್ಕ್, ವಿರಾಜಪೇಟೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಾದ ಶ್ರೀಮತಿ.ಅನಿತಾ ಬಾಯಿ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು, ದಿನಾಂಕ:17.09.2022 ರಂದು ನಡೆದ ಸಭೆಯ ನಡಾವಳಿಗಳ ಬಗ್ಗೆ ಹಾಗು ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರಮ ಸಂಖ್ಯೆ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ.ಕೆ.ಟಿ.ಪೂವಯ್ಯ<br>ಶ್ರೀ.ಕೆ.ಕೆ.ಬೋಪಯ್ಯ<br>ಶ್ರೀ.ಕೆ.ಎ.ಚಿಯ್ಯಣ್ಣ<br>ಮತ್ತು ಶ್ರೀ.ಕೆ.ಟಿ ಕಾಳಪ್ಪ<br>1ನೇ ರುದ್ರಗುಪ್ಪೆ ಗ್ರಾಮ<br>ದೂ:9483688994, 9740973915, 9481309620 ಮತ್ತು 9740028277 | • ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ಸುಮಾರು 60 ಕ್ಕೂ ಹೆಚ್ಚು ಮನೆಗಳಿದ್ದು ರಾತ್ರಿ ಸಮಯದಲ್ಲಿ ತೀರಾ ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು.<br>• ಕಂಬದಿಂದ ಕಂಬಕ್ಕೆ ಇರುವ ಅಂತರ ಹೆಚ್ಚಿದ್ದು, ವಾಹಕಗಳು ಜೋತು ಬಿದ್ದಿದ್ದು, ಸರಿಪಡಿಸುವಂತೆ ಕೋರಿದರು.<br>• ತಮ್ಮ ಸಂಬಂಧಿಕರ ಮನೆಯ ಪಕ್ಕದಲ್ಲಿಯೇ 11ಕೆ.ವಿ ವಿದ್ಯುತ್ ಮಾರ್ಗ ಹಾದು ಹೋಗಿದ್ದು ಕಂಬವನ್ನು ಸ್ಥಳಾಂತರ ಮಾಡುವಂತೆ ಶ್ರೀ.ಕೆ.ಎ.ಚಿಯ್ಯಣ್ಣ ರವರು ಕೋರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ವಿಸ್ತøತ ವರದಿಯೊಂದಿಗೆ ಅಂದಾಜುಪಟ್ಟಿ ಸಲ್ಲಿಸುವಂತೆ ಸಂಭಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚನೆ ನೀಡಿದರು ಈ ಬಗ್ಗೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈ ಬಗ್ಗೆ ಉತ್ತರಿಸುತ್ತಾ ಈಗಾಗಲೇ ಸದರಿ ಸ್ಥಳ ಪರಿಶೀಲನೆ ಮಾಡಿ ಅಭಿವೃದ್ಧಿ ಹಾಗು ವಿಸ್ತರಣೆ ಲೆಕ್ಕಶಿರ್ಷಿಕೆಯಡಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಚೇರಿಗೆ ಸಲ್ಲಿಸಿದ್ದು ನಿಗಮ ಕಛೇರಿಯಿಂದ ಅನುದಾನ ದೊರೆತೊಡನೆ ಮಂಜೂರಾತಿ ಪಡೆದುಕೊಂಡು ಕಾಮಗಾರಿ ನಿರ್ವಹಿಸಲಾಗುವುದೆಂದು ತಿಳಿಸಿದರು.<br>* ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಸದರಿ ವ್ಯಾಪ್ತಿಯಲ್ಲಿ ಜೋತು ಬಿದ್ದಿರುವ ವಿದ್ಯುತ್ ಮಾರ್ಗಗಳ ವಾಹಕಗಳನ್ನು ಎಳೆದು ಬಿಗಿಗೊಳಿಸುವಂತೆಯೂ ಆವಶ್ಯವೆನಿಸಿದಲ್ಲಿ ಮಧ್ಯಂತರ ವಿದ್ಯುತ್ ಕಂಬಗಳನ್ನು ಅಳವಡಿಸಿ ವಿದ್ಯುತ್ ಮಾರ್ಗಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವಂತೆಯೂ ಹಾಗು ವಿದ್ಯುತ್ ಅಪಘಾತ ಗಳು ಉಂಟಾಗದಂತೆ ಎಚ್ಚರವಹಿಸುವಂತೆಯೂ ಶಾಖಾಧಿಕಾರಿಗಳಿಗೆ ಸೂಚನೆ ನೀಡಿದರು.<br>* ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ನಿಗಮದ ನಿಯಮಾನುಸಾರ ವಿದ್ಯುತ್ ಮಾರ್ಗದ ಸ್ಥಳಾಂತರವನ್ನು ಸ್ವಯಂ ನಿರ್ವಹಣಾ ಯೋಜನೆಯಡಿ ನಿರ್ವಹಿಸಿಕೊಳ್ಳುವಂತೆ ತಿಳಿಸಿ, ಶಾಖಾಧಿಕಾರಿಗಳಿಗೆ ಸ್ವಯಂ ನಿರ್ವಹಣಾ ಯೋಜನೆಯಡಿ ಕಾಮಗಾರಿ ನಿರ್ವಹಿಸಲು ಕ್ರಮವಹಿಸುವಂತೆ ಸೂಚಿಸಿದರು. |

| | | | |
|---|---|---|---|
| 3 | ಶ್ರೀ.ಬಿ.ಬಿ.ಮಂದಪ್ಪ<br>ಕೆದಮುಳ್ಳೂರು ಗ್ರಾಮ<br>ದೂ.9900532051 | • ತಮ್ಮ ಕೆದಮುಳ್ಳೂರು ವ್ಯಾಪ್ತಿಗೆ ನಿಗಧಿತ ದಿನಾಂಕಗಳಂದು ವಿದ್ಯುತ್ ಬಿಲ್ ನೀಡದೇ ಇದ್ದು, ಎರಡು ತಿಂಗಳಿಗೊಮ್ಮೆ ಮಾಪಕ ಓದುಗರು ಬದಲಾಗುತ್ತಿದ್ದು, ಸದರಿ ಬರುತ್ತಿರುವ ಮಾಪಕ ಓದುಗರಿಗೆ ರೀಡಿಂಗ್ ಓದಲು ಬರುವುದಿಲ್ಲವೆಂದು ತಿಳಿಸಿ ತಮ್ಮ ಆರ್.ಆರ್.ಸಂಖ್ಯೆ:47272 ಗೆ 120 ಯುನಿಟ್ ಹೆಚ್ಚಿಗೆ ರೀಂಡಿಗ್ ಕೊಟ್ಟಿರುತ್ತಾರೆ ಎಂದು ದೂರಿ, ತಮ್ಮ ವ್ಯಾಪ್ತಿಗೆ ನಿಗಮದ ಮಾಪಕ ಓದುಗರನ್ನು ನಿಯೋಜಿಸುವಂತೆ ಕೋರಿದರು. | • ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್ ನಿಗಮದಿಂದ ಏಜೆನ್ಸಿಯವರಿಗೆ ರೀಡಿಂಗ್ ಮಾಡಲು ಟೆಂಡರ್ ನೀಡಿದ್ದು, ಸದರಿಯವರು ಕಡ್ಡಾಯವಾಗಿ ನಿಗಧಿತ ಸಮಯಕ್ಕೆ ರೀಡಿಂಗ್ ಮಾಡುವುದು ಅವರ ಕರ್ತವ್ಯವಾಗಿರುತ್ತದೆ ಆದರೆ ಸದರಿಯವರು ನಿಗಧಿತ ಸಮಯಕ್ಕೆ ರೀಡಿಂಗ್ ಮಾಡುತ್ತಿಲ್ಲ ಈ ಬಗ್ಗೆ ಮೇಲಧಿಕಾರಿವರಿಗೆ ಈಗಾಗಲೆ ತಿಳಿಸಿದ್ದು ಮುಂದಿನ ಎರಡು ತಿಂಗಳಿನಲ್ಲಿ ಟೆಂಡರ್ ಅವಧಿ ಮುಗಿಯಲಿದ್ದು, ನಿಗಮದಿಂದ ನೌಕರರನ್ನು ನಿಯೋಜಿಸಲು ಮೇಲಾಧಿಕಾರಿಯವರಿಗೆ ಗಮನಕ್ಕೆ ತರಲಾಗುವುದೆಂದು ತಿಳಿಸಿದರು.<br>• ಆರ್.ಆರ್. ಸಂಖ್ಯೆ:47272 ರ ಪರಿಷ್ಕೃತ ಬಿಲ್ಲನ್ನು ಒದಗಿಸುವಂತೆ ಹಿರಿಯ ಸಹಾಯಕರಿಗೆ ಸೂಚಿಸಿದರು. |
| 4 | ಪಿ.ಟಿ.ಪೂಣಚ್ಚ<br>ಕೆದಮುಳ್ಳೂರು<br>ದೂ:8296425188 | • ತಮ್ಮ ತೋರ ಕೆದಮುಳ್ಳೂರು ಗ್ರಾಮವು ತೀರಾ ಕುಗ್ರಾಮವಾಗಿದ್ದು ಸದರಿ ವ್ಯಾಪ್ತಿಗೆ ರಾತ್ರಿ ಸಮಯದಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು.<br>• ತಮ್ಮ ವ್ಯಾಪ್ತಿಯ ಕೆಲವು ಕಡೆ ವಾಹಕವು ತೀರಾ ಕೆಳಮಟ್ಟದಲ್ಲಿರುವುದಾಗಿಯ ಮತ್ತು ಕೆಲವೊಂದು ಕಂಬಗಳು ವಾಲಿಕೊಂಡಿದ್ದು ಸರಿಪಡಿಸಿಕೊಡುವಂತೆ ಕೋರಿದರು. | • ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್ ಸದರಿ ವ್ಯಾಪ್ತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಹೊಸ ಪರಿವರ್ತಕ ಅವಶ್ಯವಿದ್ದಲ್ಲಿ ಅಂದಾಜು ಪಟ್ಟಿ ತಯಾರಿಸುವಂತೆಯು ಇಲ್ಲದಿದ್ದಲ್ಲಿ ತ್ರೀ-ಫೇಸ್ ವಾಹಕವನ್ನು ಎಳೆಯಲು ಕ್ರಮವಹಿಸುವಮತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br>• ಸದರಿ ಸ್ಥಳವನ್ನು ಪರಿಶೀಲಿಸಿ ವಾಲಿಕೊಂಡಿರುವ ಕಂಬಗಳನ್ನು ನೇರಮಾಡಿ ಅವಶ್ಯವಿದ್ದಲ್ಲಿ ಆನೆಕಾರಿಡಾರ್ ಯೋಜನೆಯಡಿ ಮಧ್ಯಂತರ ಕಂಬಗಳನ್ನು ಅಳವಡಿಸಿಕೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |

29/09

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ವಿಭಾಗ
ಚಾವಿಸನಿನಿ, ಮಡಿಕೇರಿ

ಪ್ರತಿಯನ್ನು

1. ಮಾನ್ಯ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಚಾ.ವಿ.ಸ.ನಿ.ನಿ.,ಮೈಸೂರು ರವರ ದಯಾಪರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಚಾವಿಸನಿನಿ, ಮೈಸೂರು ರವರ ದಯಾಪರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಮಾನ್ಯ ಪ್ರಧಾನ ವ್ಯವಸ್ಥಾಪಕರು(ವಿ) ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು ರವರ ದಯಾಪರ ಅವಗಾಹನೆಗೆ ಸಲ್ಲಿಸಲಾಗಿದೆ.
4. ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕಾರ್ಯ ನಿರ್ವಾಹಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು ರವರ ದಯಾಪರ ಅವಗಾಹನೆಗೆ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾ),ತಾಂತ್ರಿಕ ಸಹಾಯಕರು, ನಿಗಮ ಕಛೇರಿ, ಚಾ.ವಿ.ಸ.ನಿ.ನಿ.,ಮೈಸೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಕಚೇರಿ ಪ್ರತಿ.